**SSP ಯಲ್ಲಿ 2023-24 ನೇ ಸಾಲಿನಲ್ಲಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ಮೊದಲು ಬಳಕೆದಾರರ ಕೈಪಿಡಿಯನ್ನು ಸಂಪೂರ್ಣವಾಗಿ ಪರಾಮರ್ಶಿಸಿ ನಂತರ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.**

**ಸೂಚನೆಗಳು :-**

1 . ಅರ್ಜಿ ಸಲ್ಲಿಸುವಾಗ ಯಾವುದೇ ತಪ್ಪಾದ ಮಾಹಿತಿಯನ್ನು ಸಲ್ಲಿಸಿದ್ದಲ್ಲಿ ಸದರಿ ಅರ್ಜಿಯು ಸಂಬಂದಿಸಿದ ಪ್ರಾಯೋಜಿಕ ಕಲ್ಯಾಣ ಇಲಾಖೆಯಿಂದ (Sponsored Welfare Department ) ತಿರಸ್ಕೃತಗೊಳ್ಳುತ್ತದೆ

2 . ಸ್ಟೆಪ್ -1 ರಲ್ಲಿ ಕೇಳಲಾಗುತ್ತಿರುವ 10 ನೇ ತರಗತಿ ನೋಂದಣಿ ಸಂಖ್ಯೆ, ಜಾತಿ / ಆದಾಯ /ಇ.ಡಬ್ಲ್ಯೂ .ಎಸ್ ಪ್ರಮಾಣ ಪತ್ರಗಳು, ಎನ್.ಎಸ್.ಪಿ ಸಂಖ್ಯೆ , ವಿಕಲಚೇತನ ಪ್ರಮಾಣ ಪತ್ರ(UDID ) ಇದರಲ್ಲಿ ನಿಮಗೆ ಅನ್ವಯವಾಗುವ ವಿವರಗಳ ಪ್ರಮಾಣಪತ್ರಗಳನ್ನು ಕಡ್ಡಾಯವಾಗಿ ವಿದ್ಯಾರ್ಥಿಯ ಹೆಸರಿನಲ್ಲಿಯೇ ಪಡೆದು ಅರ್ಜಿ ಸಲ್ಲಿಸತಕ್ಕದ್ದು.

3 . ಸ್ಟೆಪ್-2 ರಲ್ಲಿ ಕೇಳಲಾಗುತ್ತಿರುವ ಶೈಕ್ಷಣಿಕ ಮಾಹಿತಿಯನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯ / ಮಂಡಳಿ / UUCMS / KEA ಯವರಿಂದ ಪಡೆದು ಪ್ರದರ್ಶಿಸಲಾಗುತ್ತಿದ್ದು ಸದರಿ ಮಾಹಿತಿಯಲ್ಲಿ ಏನಾದರು ತಪ್ಪುಗಳು ಇದ್ದಲ್ಲಿ ಅರ್ಜಿ ಸಲ್ಲಿಸುವ ಮೊದಲು ಸಂಬಂಧಪಟ್ಟ ವಿಶ್ವವಿದ್ಯಾಲಯ / ಮಂಡಳಿ / UUCMS / KEA ರವರನ್ನು ಕಾಲೇಜು ವಿದ್ಯಾರ್ಥಿವೇತನ ಸಬಲೀಕರಣ (Scholarship Empowerment Officer of the college )ಅಧಿಕಾರಿಗಳ ಮೂಲಕ ಸಂಪರ್ಕಿಸಿ ತಪ್ಪಾದ ಮಾಹಿತಿಯನ್ನು ಸರಿಪಡಿಸಿಕೊಂಡು ನಂತರ ಅರ್ಜಿ ಸಲ್ಲಿಸುವುದು.

4 . ಹಿಂದಿನ ವರ್ಷದಲ್ಲಿ ತೇರ್ಗಡೆಯಾದ ಸರಿಯಾದ ವಿವರಗಳನ್ನು ಸಲ್ಲಿಸುವುದು.

5 . ಸ್ಟೆಪ್-3 ರಲ್ಲಿ ಇ- ಧೃಡೀಕರಣಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ಪ್ರಮಾಣಪತ್ರದ ಇ-ಧೃಡೀಕರಣ ಸಂಖ್ಯೆಯನ್ನು (ಅನ್ವಯವಾದಲ್ಲಿ ಮಾತ್ರ ) ನಮೂದಿಸುವುದು. ಹಾಗೂ ಇ- ಧೃಡೀಕರಣಕ್ಕೆ ಸಂಬಂಧಪಟ್ಟ ವಿವರಗಳನ್ನು ಪ್ರತ್ಯೇಕವಾಗಿ ನೀಡಲಾಗಿದ್ದು ಸದರಿ ಕಡತವನ್ನು ಪರಾಮರ್ಶಿಸಲು ತಿಳಿಸಲಾಗಿದೆ.

6 . ಸ್ಟೆಪ್-4 ರಲ್ಲಿ ವಸತಿನಿಲಯ ಹಾಗೂ ಡೇ-ಸ್ಕಾಲರ್ ಗೆ ಸಂಬಂಧಪಟ್ಟ ಮಾಹಿತಿಯನ್ನು ಕೇಳಲಾಗಿದ್ದು ವಿವರವಾದ ಮಾಹಿತಿಯನ್ನು ಈ ಕೆಳಗೆ ವಿವರಿಸಲಾಗಿದೆ


7 . ಅರ್ಜಿ ಅಂತಿಮ ಸಲ್ಲಿಕೆಯನ್ನು ಮಾಡುವ ಮೊದಲು, ಸಲ್ಲಿಸಲಾಗಿರುವ ಎಲ್ಲಾ ವಿವರಗಳು ಸರಿಯಾಗಿವೆಯೇ ಎಂದು ಖಚಿತಪಡಿಸಿಕೊಂಡು ನಂತರ ಅರ್ಜಿ ಸಲ್ಲಿಸಬೇಕು

8 . ಅರ್ಜಿ ಸಲ್ಲಿಸಿದ ನಂತರ ಯಾವುದೇ ಬದಲಾವಣೆಗಳಿಗೆ ಅವಕಾಶವಿರುವುದಿಲ್ಲ ಹಾಗೂ ಅರ್ಜಿಯಲ್ಲಿ ತಪ್ಪಾದ/ ಅನ್ಯ ವಿದ್ಯಾರ್ಥಿಯ ಮಾಹಿತಿಯು ಕಂಡುಬಂದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುತ್ತದೆ.

9 . ಅರ್ಜಿ ಸಲ್ಲಿಕೆಯಾದ 30 ದಿನಗಳ ಒಳಗೆ (ಪ್ರಾಯೋಜಿಕ ಕಲ್ಯಾಣ ಇಲಾಖೆಯ ಮಾರ್ಗಸೂಚಿಯನ್ವಯ) ವಿದ್ಯಾರ್ಥಿಯ ಬ್ಯಾಂಕಿನೊಂದಿಗೆ ವಿದ್ಯಾರ್ಥಿಯ ಆಧಾರ್ ಜೋಡಣೆ ಮತ್ತು NPCI ಜೋಡಣೆ ಆಗದೆ ಇದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುತ್ತದೆ.

**ಅರ್ಜಿ ಸಲ್ಲಿಸುವ ವೆಬ್ಸ್ಯೆಟ್ ವಿಳಾಸ :-**
https://ssp.postmatric.karnataka.gov.in/


ಅರ್ಜಿ ಸಲ್ಲಿಸುವ ಮೊದಲು SSP ತಂತ್ರಾಂಶದಲ್ಲಿ ಲಾಗಿನ್ ಆಗಬೇಕು. ಇದಕ್ಕಾಗಿ,
**"ಎಸ್ ಎಸ್ ಪಿ ವಿದ್ಯಾರ್ಥಿ ಖಾತೆಗೆ ಲಾಗಿನ್ ಆಗಲು ಇಲ್ಲಿ ಕ್ಲಿಕ್ ಮಾಡಿ "** ಆಯ್ಕೆಯನ್ನು ಮಾಡಿ




- ನಂತರ ಈ ಕೆಳಗಿನ ಚಿತ್ರದಲ್ಲಿ ಪ್ರದರ್ಶಿಸಿದಂತೆ ಲಾಗಿನ್ ಪುಟವು ಗೋಚರವಾಗುತ್ತದೆ
- ಬಳಕೆದಾರರ ಹೆಸರು ಫೀಲ್ಡ್ ಅಲ್ಲಿ ನಿಮ್ಮ ಎಸ್ ಎಸ್ ಪಿ ಐಡಿ ಯನ್ನು ಭರ್ತಿಮಾಡಬೇಕು
- ಪಾಸ್ವರ್ಡ್ ಫೀಲ್ಡ್ ಅಲ್ಲಿ ಎಸ್ ಎಸ್ ಪಿ ಯ ಪಾಸ್ವರ್ಡ್ ಅನ್ನು ಭರ್ತಿಮಾಡಬೇಕು
- ನಂತರ ಚಿತ್ರದಲ್ಲಿ ಪ್ರದರ್ಶಿಸಿದ ಕ್ಯಾಪ್ಚಾವನ್ನು ಭರ್ತಿಮಾಡಬೇಕು
- ಎಲ್ಲಾ ವಿವರಗಳನ್ನು ಭರ್ತಿ ಮಾಡಿದ ನಂತರ ಲಾಗಿನ್ ಆಯ್ಕೆಯನ್ನು ಮಾಡಬೇಕು



- ನಿಮಗೆ ಈ ಕೆಳಗಿನಂತೆ ವೆಬ್ ಪುಟವು ಪ್ರದರ್ಶಿತವಾಗುತ್ತದೆ
- ಇದರಲ್ಲಿ **"Apply for Postmatric Scholarship "** ಮೆನುವನ್ನು ಆಯ್ಕೆ ಮಾಡಿಕೊಳ್ಳಬೇಕು
- ಆಯ್ಕೆ ಮಾಡಿಕೊಂಡ ನಂತರ ಸ್ಟೆಪ್-1 ಮೆನುವಿನಲ್ಲಿ **"Apply"** ಅನ್ನು ಆಯ್ಕೆ ಮಾಡಿಕೊಳ್ಳಬೇಕು






# ಸ್ಟೆಪ್-1


## ಸೂಚನೆಗಳು :-

1 . ಹೊಸದಾಗಿ ಅರ್ಜಿ ಸಲ್ಲಿಸುತ್ತಿರುವ ವಿದ್ಯಾರ್ಥಿಗಳು ಎಲ್ಲಾ ವಿವರಗಳನ್ನು ಭರ್ತಿ ಮಾಡಿ "Save & Proceed "ಆಯ್ಕೆಯನ್ನು ಮಾಡಿ ಸ್ಟೆಪ್-2 ಗೆ ಮುಂದುವರೆಯುವುದು

2 . ಹಿಂದಿನ ವರ್ಷ ಅರ್ಜಿ ಸಲ್ಲಿಸಿ, ಸದರಿ ಅರ್ಜಿಯು ಅನುಮೋದನೆಗೊಂಡಿದ್ದರೆ ಅಂತಹ ವಿದ್ಯಾರ್ಥಿಗಳು ಸ್ಟೆಪ್-1 ವಿವರಗಳನ್ನು ಗಮನಿಸಿ "Save & Proceed "ಆಯ್ಕೆಯನ್ನು ಮಾಡಿ ಸ್ಟೆಪ್-2 ಗೆ ಮುಂದುವರೆಯುವುದು ಹಾಗೂ ಪ್ರದರ್ಶಿಸಲಾದ ವಿವರಗಳು ತಪ್ಪಾಗಿ ಇದ್ದರೆ, ಸಂಬಂಧಪಟ್ಟ ಪ್ರಾಯೋಜಿಕ ಕಲ್ಯಾಣ ಇಲಾಖೆಯ (Sponsored welfare Department) ತಾಲೂಕು ಅಧಿಕಾರಿಗಳನ್ನು ಸಂಪರ್ಕಿಸಿ ತಿದ್ದುಪಡಿ ಮಾಡಿಸಿಕೊಂಡು ಅರ್ಜಿ ಸಲ್ಲಿಸುವುದು .

3 . ಹಿಂದಿನ ವರ್ಷ ಅರ್ಜಿ ಸಲ್ಲಿಸಿ, ಸದರಿ ಅರ್ಜಿಯು ತಿರಸ್ಕೃತಗೊಂಡಿದ್ದರೆ ಅಂತಹ ವಿದ್ಯಾರ್ಥಿಗಳು ಸ್ಟೆಪ್-1 ವಿವರಗಳನ್ನು ಗಮನಿಸಿ "Save & Proceed "ಆಯ್ಕೆಯನ್ನು ಮಾಡಿ ಸ್ಟೆಪ್-2 ಗೆ ಮುಂದುವರೆಯುವುದು ಹಾಗೂ ಪ್ರದರ್ಶಿಸಲಾದ ವಿವರಗಳು ತಪ್ಪಾಗಿ ಇದ್ದರೆ, ತಿದ್ದುಪಡಿ (ಎಡಿಟ್) ಮಾಡಿಕೊಂಡು ಅರ್ಜಿ ಸಲ್ಲಿಸುವುದು .

## 10 ನೇ ತರಗತಿ ವಿವರಗಳು (SSLC Details)





**ಇದರಲ್ಲಿ ನೀವು 10 ನೇ ತರಗತಿಯಲ್ಲಿ ವ್ಯಾಸಂಗ ಮಾಡಿರುವ ಮಂಡಳಿಯನ್ನು ಆಯ್ಕೆ ಮಾಡಿಕೊಂಡು ಕೇಳಲಾದ ವಿವರಗಳನ್ನು ನಮೂದಿಸಬೇಕು**

- ನೀವು 10 ನೇ ತರಗತಿ ವ್ಯಾಸಂಗವನ್ನು ಕರ್ನಾಟಕ ರಾಜ್ಯ "**SSLC** " ಮಂಡಳಿಯಲ್ಲಿ ಮಾಡಿದ್ದರೆ "**SSLC** " ಆಯ್ಕೆಯನ್ನು ಮಾಡಿ, ನಿಮ್ಮ 10 ನೇ ತರಗತಿ ನೋಂದಣಿ ಸಂಖ್ಯೆಯನ್ನು ನಮೂದಿಸಿ "Get Details " ಆಯ್ಕೆಯನ್ನು ಮಾಡಿ ಪ್ರದರ್ಶಿಸಲಾದ ವಿವರಗಳು ಸರಿಯಾಗಿದೆಯೇ ಹಾಗೂ ನಿಮಗೆ ಸೇರಿದ ವಿವರಗಳೇ ಎಂದು ಪರಿಶೀಲಿಸಿಕೊಂಡು "Save " ಆಯ್ಕೆಯನ್ನು ಮಾಡಬೇಕು. ಇಲ್ಲವಾದಲ್ಲಿ ಸರಿಯಾದ ನೋಂದಣಿ ಸಂಖ್ಯೆಯನ್ನು ನಮೂದಿಸಿ "Save " ಆಯ್ಕೆಯನ್ನು ಮಾಡಬೇಕು.




- ನೀವು 10 ನೇ ತರಗತಿ ವ್ಯಾಸಂಗವನ್ನು "**CBSE** " ಮಂಡಳಿಯಲ್ಲಿ ಮಾಡಿದ್ದರೆ "**CBSE** " ಆಯ್ಕೆಯನ್ನು ಮಾಡಿ, ನಿಮ್ಮ 10 ನೇ ತರಗತಿ ನೋಂದಣಿ ಸಂಖ್ಯೆ , ಹೆಸರು ಮತ್ತು ತೇರ್ಗಡೆಯಾದ ವರ್ಷವನ್ನು ನಮೂದಿಸಿ "Get Details " ಆಯ್ಕೆಯನ್ನು ಮಾಡಿ ಪ್ರದರ್ಶಿಸಲಾದ ವಿವರಗಳು ಸರಿಯಾಗಿದೆಯೇ ಹಾಗೂ ನಿಮಗೆ ಸೇರಿದ ವಿವರಗಳೇ ಎಂದು ಪರಿಶೀಲಿಸಿಕೊಂಡು "Save " ಆಯ್ಕೆಯನ್ನು ಮಾಡಬೇಕು. ಇಲ್ಲವಾದಲ್ಲಿ ಸರಿಯಾದ ವಿವರಗಳನ್ನು ನಮೂದಿಸಿ "Save " ಆಯ್ಕೆಯನ್ನು ಮಾಡಬೇಕು.





- ನೀವು 10 ನೇ ತರಗತಿ ವ್ಯಾಸಂಗವನ್ನು "**ICSE** " ಮಂಡಳಿಯಲ್ಲಿ ಮಾಡಿದ್ದರೆ "**ICSE** " ಆಯ್ಕೆಯನ್ನು ಮಾಡಿ, ನಿಮ್ಮ 10 ನೇ ತರಗತಿ ನೋಂದಣಿ ಸಂಖ್ಯೆ ಮತ್ತು ತೇರ್ಗಡೆಯಾದ ವರ್ಷವನ್ನು ನಮೂದಿಸಿ "Get Details " ಆಯ್ಕೆಯನ್ನು ಮಾಡಿ ಪ್ರದರ್ಶಿಸಲಾದ ವಿವರಗಳು ಸರಿಯಾಗಿದೆಯೇ ಹಾಗೂ ನಿಮಗೆ ಸೇರಿದ ವಿವರಗಳೇ ಎಂದು ಪರಿಶೀಲಿಸಿಕೊಂಡು "Save " ಆಯ್ಕೆಯನ್ನು ಮಾಡಬೇಕು. ಇಲ್ಲವಾದಲ್ಲಿ ಸರಿಯಾದ ವಿವರಗಳನ್ನು ನಮೂದಿಸಿ "Save " ಆಯ್ಕೆಯನ್ನು ಮಾಡಬೇಕು.





- ನೀವು 10 ನೇ ತರಗತಿ ವ್ಯಾಸಂಗವನ್ನು "ಕರ್ನಾಟಕದ ಹೊರಗಿನ ಇತರೆ ರಾಜ್ಯ ಮಂಡಳಿಯಲ್ಲಿ / IGCSE / 2004 ಕ್ಕು ಮೊದಲು ತೇರ್ಗಡೆ ಹೊಂದಿದ್ದರೆ "**ಇತರೆ ರಾಜ್ಯ ಮಂಡಳಿ / IGCSE / 2004 ಕ್ಕು ಮೊದಲು ಎಸ್‌ಎಸ್‌ಎಲ್ ಸಿ** " ಆಯ್ಕೆಯನ್ನು ಮಾಡಿ ನಿಮ್ಮ 10 ನೇ ತರಗತಿ ತೇರ್ಗಡೆ ಪ್ರಮಾಣಪತ್ರವನ್ನು ಇ-ಧೃಡೀಕರಣ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಿ ಪ್ರಮಾಣಪತ್ರವನ್ನು ಸಂಬಂದಪ್ಪಟ್ಟ ಇಲಾಖೆಯ ಜಿಲ್ಲಾ ಅಧಿಕಾರಿಗಳನ್ನು ಸಂಪರ್ಕಿಸಿ ಇ-ಧೃಡೀಕರಣ ಮಾಡಿಸಿದ ನಂತರ ಇ-ಧೃಡೀಕರಣದ ಸಂಖ್ಯೆಯನ್ನು 3 ನೇ ಹಂತದಲ್ಲಿ ನಮೂದಿಸಬೇಕು.




- ನೀವು 10 ನೇ ತರಗತಿ ವ್ಯಾಸಂಗವನ್ನು ಕರ್ನಾಟಕ ರಾಜ್ಯ "ಕರ್ನಾಟಕ ಮುಕ್ತ ಶಾಲೆ " ಮಂಡಳಿಯಲ್ಲಿ ಮಾಡಿದ್ದರೆ "**ಕರ್ನಾಟಕ ಮುಕ್ತ ಶಾಲೆ** " ಆಯ್ಕೆಯನ್ನು ಮಾಡಿ, ನಿಮ್ಮ 10 ನೇ ತರಗತಿ ನೋಂದಣಿ ಸಂಖ್ಯೆ ಮತ್ತು ತೇರ್ಗಡೆಯಾದ ವರ್ಷವನ್ನು ನಮೂದಿಸಿ "Get Details " ಆಯ್ಕೆಯನ್ನು ಮಾಡಿ ಪ್ರದರ್ಶಿಸಲಾದ ವಿವರಗಳು ಸರಿಯಾಗಿದೆಯೇ ಹಾಗೂ ನಿಮಗೆ ಸೇರಿದ ವಿವರಗಳೇ ಎಂದು ಪರಿಶೀಲಿಸಿಕೊಂಡು "Save " ಆಯ್ಕೆಯನ್ನು ಮಾಡಬೇಕು. ಇಲ್ಲವಾದಲ್ಲಿ ಸರಿಯಾದ ವಿವರಗಳನ್ನು ನಮೂದಿಸಿ "Save " ಆಯ್ಕೆಯನ್ನು ಮಾಡಬೇಕು.





- ನೀವು 10 ನೇ ತರಗತಿ ವ್ಯಾಸಂಗವನ್ನು "NIOS" ಮಂಡಳಿಯಲ್ಲಿ ಮಾಡಿದ್ದರೆ "NIOS" ಆಯ್ಕೆಯನ್ನು ಮಾಡಿ ನಿಮ್ಮ 10 ನೇ ತರಗತಿ ತೇರ್ಗಡೆ ಪ್ರಮಾಣಪತ್ರವನ್ನು ಇ-ಧೃಡೀಕರಣ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಿ ಪ್ರಮಾಣಪತ್ರವನ್ನು ಸಂಬಂದಪಟ್ಟ ಇಲಾಖೆಯ ಜಿಲ್ಲಾ ಅಧಿಕಾರಿಗಳನ್ನು ಸಂಪರ್ಕಿಸಿ ಇ-ಧೃಡೀಕರಣ ಮಾಡಿಸಿದ ನಂತರ ಇ-ಧೃಡೀಕರಣದ ಸಂಖ್ಯೆಯನ್ನು 3 ನೇ ಹಂತದಲ್ಲಿ ನಮೂದಿಸಬೇಕು.



## ಜಾತಿ / ಆದಾಯ ಪ್ರಮಾಣಪತ್ರದ ವಿವರಗಳು  (Caste/ Income Details)


**ಗಮನಿಸಿ** :-

- ➢ ಜಾತಿ / ಆದಾಯ/ಇ.ಡಬ್ಲ್ಯೂ.ಎಸ್ ಪ್ರಮಾಣಪತ್ರವು ವಿದ್ಯಾರ್ಥಿಯ ಹೆಸರಿನಲ್ಲಿಯೇ ಇರಬೇಕು.
- ➢ ಯಾವುದೇ **ಮುಖ್ಯಮಂತ್ರಿ ವಿದ್ಯಾನಿಧಿ ಯೋಜನೆಗಳಿಗೆ ಮಾತ್ರ** ಅರ್ಜಿ ಸಲ್ಲಿಸುತ್ತಿದ್ದಲ್ಲಿ ಜಾತಿ ಮತ್ತು ಆದಾಯ ಪ್ರಮಾಣಪತ್ರದ ಅವಶ್ಯಕತೆ ಇರುವುದಿಲ್ಲ. ಆದರೆ ವಿದ್ಯಾನಿಧಿ ಯೋಜನೆಗಳ ಜೊತೆ ಇತರೆ ಕಲ್ಯಾಣ ಇಲಾಖೆಗಳ (ಸಮಾಜ ಕಲ್ಯಾಣ / ಪರಿಶಿಷ್ಟ ಪಂಗಡಗಳ ಕಲ್ಯಾಣ / ಹಿಂದುಳಿದ ವರ್ಗಗಳ ಕಲ್ಯಾಣ / ಅಲ್ಪಸಂಖ್ಯಾತರ ಕಲ್ಯಾಣ/ ವಿಕಲಚೇತನ ಕಲ್ಯಾಣ ಇಲಾಖೆ/ ಬ್ರಾಹ್ಮಣ ಅಭಿವೃದ್ಧಿ ಮಂಡಳಿ/ ಆರ್ಯವೈಶ್ಯ ಅಭಿವೃದ್ಧಿ ಮಂಡಳಿ ) ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುತ್ತಿದ್ದಲ್ಲಿ ಜಾತಿ, ಆದಾಯ / ಇಡಬ್ಲ್ಯೂ ಎಸ್ ಪ್ರಮಾಣಪತ್ರದ ಸಂಖ್ಯೆಯನ್ನು ನಮೂದು ಮಾಡಿ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.




- ❖ ನಿಮ್ಮ ಧರ್ಮವನ್ನು ಆಯ್ಕೆಮಾಡಿ
- ❖ ನಿಮ್ಮ ಬಳಿ ಜಾತಿ / ಆದಾಯ/ಇ.ಡಬ್ಲ್ಯೂ.ಎಸ್ ಪ್ರಮಾಣಪತ್ರವು ಇದ್ದಲ್ಲಿ "ಹೌದು" ಎನ್ನುವ ಆಯ್ಕೆ ಮಾಡಿ ಅರ್ಜಿ ಪ್ರಮಾಣಪತ್ರದ ವಿವರಗಳನ್ನು ಸಲ್ಲಿಸಬೇಕು.
- ❖ ಜಾತಿ ಮತ್ತು ಆದಾಯ ಪ್ರಮಾಣಪತ್ರಗಳು ಬೇರೆ ಬೇರೆ ಇದ್ದಲ್ಲಿ ಸಂಬಂಧಿಸಿದ RD ಸಂಖ್ಯೆಯನ್ನು ಜಾತಿ ಮತ್ತು ಆದಾಯ ಪ್ರಮಾಣಪತ್ರದ ಪಟ್ಟಿಯಲ್ಲಿ ನಮೂದಿಸಬೇಕು
- ❖ ಜಾತಿ ಮತ್ತು ಆದಾಯ ಪ್ರಮಾಣಪತ್ರಗಳು ಒಂದೇ ಆಗಿದ್ದಲ್ಲಿ, ಒಂದೇ  RD ಸಂಖ್ಯೆಯನ್ನು ಜಾತಿ ಮತ್ತು ಆದಾಯ ಪ್ರಮಾಣಪತ್ರದ ಪಟ್ಟಿಯಲ್ಲಿ ನಮೂದಿಸಬೇಕು.
- ❖ ಇ.ಡಬ್ಲ್ಯೂ.ಎಸ್ ಪ್ರಮಾಣಪತ್ರವು ಇದ್ದಲ್ಲಿ ಒಂದೇ  RD ಸಂಖ್ಯೆಯನ್ನು ಜಾತಿ ಮತ್ತು ಆದಾಯ ಪ್ರಮಾಣಪತ್ರದ ಪಟ್ಟಿಯಲ್ಲಿ ನಮೂದಿಸಬೇಕು.
- ❖ ನೀವು ಯಾವುದೇ ಅಲ್ಪಸಂಖ್ಯಾತ ಧರ್ಮೀಯರಾಗಿದ್ದು "ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಿಂದ ನೀಡುವ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುತ್ತಿದ್ದಲ್ಲಿ, ನಿಮ್ಮ ಧರ್ಮವನ್ನು ಆಯ್ಕೆ ಮಾಡಿ, ಹಾಗೂ SSP ಯಲ್ಲಿ ಅರ್ಜಿ ಸಲ್ಲಿಸುವ ಮೊದಲು "NSP " ಗೆ ಅರ್ಜಿ ಸಲ್ಲಿಸಿ, NSP ಸಂಖ್ಯೆಯನ್ನು ನಮೂದಿಸುವುದು ಕಡ್ಡಾಯವಾಗಿದೆ. ಇಲ್ಲವಾದಲ್ಲಿ ನಿಮ್ಮ ಅರ್ಜಿಯು ಸದರಿ ಇಲಾಖೆಗೆ ವರ್ಗಾವಣೆಯಾಗುವುದಿಲ್ಲ.

**ಕಿನ್ ಆಫ್ ಡಿಫೆನ್ಸ್ (Kin Of Defence) ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುತ್ತಿದ್ದಲ್ಲಿ** ,




ನಿಮ್ಮ ಬಳಿ ಜಾತಿ / ಆದಾಯ/ಇ.ಡಬ್ಲ್ಯೂ.ಎಸ್ ಪ್ರಮಾಣಪತ್ರ "ಇಲ್ಲ " ಎನ್ನುವ ಆಯ್ಕೆ ಮಾಡಿ

- ನಿಮ್ಮ ಧರ್ಮವನ್ನು ಆಯ್ಕೆಮಾಡಿ
- "kin of defence " ಆಯ್ಕೆ ಮಾಡಿ "Save and Proceed " ಆಯ್ಕೆಯನ್ನು ಮಾಡಬೇಕು
- ನಂತರ ನಿಮ್ಮ ಪೋಷಕರ ಡಿಫೆನ್ಸ್ ಸರ್ಟಿಫಿಕೇಟ್ ಅನ್ನು ಇ-ಧೃಡೀಕರಣ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಿ ಪ್ರಮಾಣಪತ್ರವನ್ನು ಸಂಬಂದಪ್ಪಟ್ಟ ಕಾಲೇಜಿನ ಅಧಿಕಾರಿಗಳನ್ನು ಸಂಪರ್ಕಿಸಿ ಇ-ಧೃಡೀಕರಣ ಮಾಡಿಸಿದ ನಂತರ ಇ-ಧೃಡೀಕರಣದ ಸಂಖ್ಯೆಯನ್ನು 3 ನೇ ಹಂತದಲ್ಲಿ ನಮೂದಿಸಬೇಕು.

**ಯಾವುದೇ ಮುಖ್ಯಮಂತ್ರಿ ವಿದ್ಯಾನಿಧಿ ಯೋಜನೆಗಳಿಗೆ (ರೈತವಿದ್ಯಾನಿಧಿ, ಸಾರಿಗೆ ವಿದ್ಯಾನಿಧಿ , ನೇಕಾರ ವಿದ್ಯಾನಿಧಿ , ಮೀನುಗಾರ ವಿದ್ಯಾನಿಧಿ ಹಾಗೂ ಕಾರ್ಮಿಕ ವಿದ್ಯಾನಿಧಿ )ಮಾತ್ರ** ಅರ್ಜಿ ಸಲ್ಲಿಸುತ್ತಿದ್ದಲ್ಲಿ ಜಾತಿ ಮತ್ತು ಆದಾಯ ಪ್ರಮಾಣಪತ್ರದ ಅವಶ್ಯಕತೆ ಇರುವುದಿಲ್ಲ.

[




- ನಿಮ್ಮ ಬಳಿ ಜಾತಿ / ಆದಾಯ/ಇ.ಡಬ್ಲ್ಯೂ.ಎಸ್ ಪ್ರಮಾಣಪತ್ರ "ಇಲ್ಲ " ಎನ್ನುವ ಆಯ್ಕೆ ಮಾಡಿ
- ನಿಮ್ಮ ಧರ್ಮವನ್ನು ಆಯ್ಕೆಮಾಡಿ
- ನಂತರ "ಸಾಮಾನ್ಯ ವರ್ಗ" ಅಥವಾ "Eligible only for Agriculture/Labour/Transport/Fisheries/Collegiate Schemes" ಎನ್ನುವ ಆಯ್ಕೆ ಮಾಡಿ ಅರ್ಜಿ ಸಲ್ಲಿಸಬೇಕು


## ವಿಕಲಚೇತನ ವಿವರಗಳು (Disability Details)




- ನೀವು ವಿಕಲಚೇತನರಾಗಿದ್ದಲ್ಲಿ "ಹೌದು " ಆಯ್ಕೆಯನ್ನು ಮಾಡಿ "ಯುಡಿಐಡಿ" ಸಂಖ್ಯೆಯನ್ನು ನಮೂದಿಸಿ, ನಂತರ ಪ್ರದರ್ಶಿಸಲಾದ ವಿವರಗಳು ಸರಿಯಾಗಿರುವುದನ್ನು ಖಚಿತಪಡಿಸಿಕೊಂಡು "Save & Proceed " ಆಯ್ಕೆಯನ್ನು ಮಾಡಿ ಮುಂದುವರೆಯಬೇಕು

- ನೀವು ವಿಕಲಚೇತನರಾಗದೆ ಇದ್ದಲ್ಲಿ " ಇಲ್ಲ " ಆಯ್ಕೆಯನ್ನು ಮಾಡಿ "Save & Proceed " ಆಯ್ಕೆಯನ್ನು ಮಾಡಿ ಮುಂದುವರೆಯಬೇಕು

## ವೈಯಕ್ತಿಕ ವಿವರಗಳು ( Personal Details)


PERSONAL DETAILS / ವೈಯಕ್ತಿಕ ವಿವರಗಳನ್ನು

ENTER PERSONAL DETAILS / ವೈಯಕ್ತಿಕ ವಿವರಗಳನ್ನು ನಮೂದಿಸಿ

| | |
|---|---|
| Student Name ವಿದ್ಯಾರ್ಥಿಯ ಹೆಸರು: | Darshan K |
| Gender ಲಿಂಗ: | Male ಪುರುಷ Female ಸ್ತ್ರೀ |
| Student's Mobile Number ವಿದ್ಯಾರ್ಥಿಯ ಮೊಬೈಲ್ ಸಂಖ್ಯೆ: | |
| E-Mail ಇ - ಮೇಲ್: | |
| Home District: ನಿಮ್ಮ ನಿವಾಸವಿರುವ ಜಿಲ್ಲೆ:* | -Select- |
| Home Taluk: ನಿಮ್ಮ ನಿವಾಸವಿರುವ ತಾಲ್ಲೂಕು:* | |
| Select Assembly Constituency: ನಿಮ್ಮ ವಿಧಾನಸಭಾ ಕ್ಷೇತ್ರ : * | |
| Pin Code ಪಿನ್ ಕೋಡ್:* | Pincode |
| Permanent Address ನಿವಾಸದ ವಿಳಾಸ: * | |
| Are you Domicile of Karnataka ? ನೀವು ಕರ್ನಾಟಕ ರಾಜ್ಯದ ನಿವಾಸಿಯೇ?:* | Yes ಹೌದು No ಇಲ್ಲ |
| Displayed details are correct ? ಪ್ರದರ್ಶಿಸಲಾದ ಎಲ್ಲಾ ವಿವರಗಳು ಸರಿಯಾಗಿವೆಯೇ?* | YES: ಹೌದು NO: ಇಲ್ಲ |


ಇದರಲ್ಲಿ ಕೇಳಲಾಗಿರುವ

- ನಿಮ್ಮ ನಿವಾಸದ ಜಿಲ್ಲೆ
- ನಿಮ್ಮ ನಿವಾಸದ ತಾಲೂಕು
- ನಿಮ್ಮ ವಿಧಾನಸಭಾ ಕ್ಷೇತ್ರ
- ಪಿನ್ ಕೋಡ್
- ನಿವಾಸದ ವಿಳಾಸ
- ನೀವು ಕರ್ನಾಟಕದ ನಿವಾಸಿ ಹೌದೋ ಅಲ್ಲವೋ. ಈ ಎಲ್ಲಾ ವಿವರಗಳನ್ನು ಆಯ್ಕೆ ಮಾಡಿ ಸ್ಟೆಪ್-1 ರಲ್ಲಿ ನಮೂದಿಸಲಾಗಿರುವ ಎಲ್ಲಾ ವಿವರಗಳು ಸರಿಯಾಗಿವೆಯೇ ಎಂದು ಪರಿಶೀಲಿಸಿಕೊಂಡು "Save & Proceed " ಮಾಡಿ ಮುಂದಿನ ಹಂತಕ್ಕೆ ಮುಂದುವರೆಯಬೇಕು.

## ಸ್ಟೆಪ್-2 – (STEP-2)

## ಕಾಲೇಜು / ಕೋರ್ಸ್ ನ ವಿವರಗಳು (College / Course Details):-

ಇದರಲ್ಲಿ, ಪ್ರಸ್ತುತ ವರ್ಷದಲ್ಲಿ ನೀವು ವ್ಯಾಸಂಗ ಮಾಡುತ್ತಿರುವ ಕಾಲೇಜು ಹಾಗೂ ಕೋರ್ಸ್ ನ ವಿವರಗಳನ್ನು ಕೇಳಲಾಗುತ್ತಿದ್ದು, ಈ ಕೆಳಗೆ ವಿವರಿಸಲಾಗಿರುವ ಅಂಶಗಳನ್ನು ಗಮನಿಸಿ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.


COLLEGE / COURSE DETAILS / ಕಾಲೇಜು / ಕೋರ್ಸ್ ನ ವಿವರಗಳು

ENTER COLLEGE / COURSE DETAILS / ಕಾಲೇಜು / ಕೋರ್ಸ್ ನ ವಿವರಗಳನ್ನು ನಮೂದಿಸಿ

PRESENT YEAR STUDY DETAILS / ಪ್ರಸ್ತುತ ವರ್ಷದ ಶೈಕ್ಷಣಿಕ ವಿವರಗಳು

Are you studying in any University/Institute located outside Karnataka? ನೀವು ಹೊರ ರಾಜ್ಯದಲ್ಲಿ ಇರುವ ವಿಶ್ವವಿದ್ಯಾಲಯ/ಶೈಕ್ಷಣಿಕ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವಿರಾ? * ○Yes ಹೌದು ○No ಇಲ್ಲ

NOTE:-PLEASE CHECK AND CONFIRM ONCE AGAIN ALL THE DETAILS ENTERED ARE CORRECT AND IN THE NAME OF YOURS (STUDENT) ONLY. APPLICATION WILL GET REJECTED IF DETAILS FOUND WRONG.

### 1. ಕರ್ನಾಟಕ ರಾಜ್ಯದ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯಾಗಿದ್ದಲ್ಲಿ ಗಮನಿಸಿ:-

**ಕರ್ನಾಟಕ ರಾಜ್ಯದ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯಾಗಿದ್ದಲ್ಲಿ, ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ಮೊದಲು, ಸಂಬಂಧಪಟ್ಟ ವಿಶ್ವವಿದ್ಯಾಲಯ / ಶೈಕ್ಷಣಿಕ ಮಂಡಳಿ / ಯುಯುಸಿಎಂಎಸ್ ರವರು ವಿದ್ಯಾರ್ಥಿಯ ಶೈಕ್ಷಣಿಕ ವಿವರಗಳನ್ನು (ಬೋನಾಫೈಡ್ ) ವಿದ್ಯಾರ್ಥಿಯ ಹೆಸರು ಮತ್ತು ಎಸ್ಎಸ್ ಪಿ ಐಡಿಯಲ್ಲಿನ ಹೆಸರಿನೊಂದಿಗೆ ತಾಳೆಯಾಗುವಂತೆ (ಆಧಾರ್ ನಲ್ಲಿರುವಂತೆ) ಎಸ್ಎಸ್ ಪಿ ತಂತ್ರಾಂಶಕ್ಕೆ ರವಾನಿಸಿವುದು ಕಡ್ಡಾಯವಾಗಿರುತ್ತದೆ. ಇಲ್ಲವಾದಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.**

**ಅರ್ಜಿ ಸಲ್ಲಿಸುವ ವಿಧಾನ:-**


COLLEGE / COURSE DETAILS / ಕಾಲೇಜು / ಕೋರ್ಸ್ ನ ವಿವರಗಳು

ENTER COLLEGE / COURSE DETAILS / ಕಾಲೇಜು / ಕೋರ್ಸ್ ನ ವಿವರಗಳನ್ನು ನಮೂದಿಸಿ


PRESENT YEAR STUDY DETAILS / ಪ್ರಸ್ತುತ ವರ್ಷದ ಶೈಕ್ಷಣಿಕ ವಿವರಗಳು

Are you studying in any University/Institute located outside Karnataka? ನೀವು ಹೊರ ರಾಜ್ಯದಲ್ಲಿ ಇರುವ ವಿಶ್ವವಿದ್ಯಾಲಯ/ಶೈಕ್ಷಣಿಕ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವಿರಾ? * ○Yes ಹೌದು ◉No ಇಲ್ಲ


Are you studying 11th or 12th in CBSE/ICSE/IGCSE board* ○Yes ಹೌದು ◉No ಇಲ್ಲ

- ನೀವು ಹೊರ ರಾಜ್ಯದಲ್ಲಿ ಇರುವ ವಿಶ್ವವಿದ್ಯಾಲಯ / ಶೈಕ್ಷಣಿಕ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವಿರಾ ಎನ್ನುವ ಪ್ರಶ್ನೆಗೆ **"ಇಲ್ಲ"** ಎಂದು ಆಯ್ಕೆ ಮಾಡಬೇಕು.
- ನೀವು ಸಿಬಿಎಸ್ ಸಿ / ಐಸಿಎಸ್ ಸಿ /ಐಜಿಸಿಎಸ್ ಸಿ ಮಂಡಳಿಯಲ್ಲಿ 11 / 12 ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವಿರಾ , ಪ್ರಶ್ನೆಗೆ **"ಇಲ್ಲ"** ಎಂದು ಆಯ್ಕೆ ಮಾಡಿ.
- ಈ ಕೆಳಗೆ ನೀಡಲಾಗಿರುವಂತೆ ನಿಮ್ಮ ಶೈಕ್ಷಣಿಕ ವಿವರಗಳ ಪುಟವು ಬಿತ್ತರವಾಗುತ್ತದೆ ಹಾಗೂ ಅದನ್ನು ಪರಿಶೀಲಿಸಿಕೊಂಡು ಸರಿಯಾದ ವಿವರಗಳು ಇದ್ದಲ್ಲಿ ಮಾತ್ರ **"ಹೌದು "** ಆಯ್ಕೆಯನ್ನು ಮಾಡಿಕೊಂಡು ಅರ್ಜಿ ಸಲ್ಲಿಸಲು ಮುಂದುವರೆಯಬೇಕು . ಹಾಗೂ ಇದರಲ್ಲಿನ

ನಿಮ್ಮ ಶೈಕ್ಷಣಿಕ ವಿವರಗಳು ತಪ್ಪಾಗಿ ಇದ್ದಲ್ಲಿ ಸಂಬಂಧಪಟ್ಟ ವಿಶ್ವವಿದ್ಯಾಲಯ / ಶೈಕ್ಷಣಿಕ ಮಂಡಳಿ / ಯುಯುಸಿಎಂಎಸ್ ರವರನ್ನು ನಿಮ್ಮ "ಕಾಲೇಜಿನ ವಿದ್ಯಾರ್ಥಿವೇತನ ಸಬಲೀಕರಣ ಅಧಿಕಾರಗಳ" (College Scholarship Empowerment Officer) ಮೂಲಕ ಸಂಪರ್ಕಿಸಿ ವಿವರಗಳನ್ನು ತಿದ್ದುಪಡಿ ಮಾಡಿಸಿಕೊಂಡು ನಂತರ ಅರ್ಜಿ ಸಲ್ಲಿಸಬೇಕು. ಇಲ್ಲವಾದಲ್ಲಿ ನಿಮ್ಮ ಅರ್ಜಿಗಳನ್ನು ಸಂಬಂಧಪಟ್ಟ ಪ್ರಾಯೋಜಿಕ ಕಲ್ಯಾಣ ಇಲಾಖೆಯ (Sponsored Welfare Department officer) ಅಧಿಕಾರಿಗಳು ತಿರಸ್ಕೃತ (**Application Reject**) ಗೊಳಿಸುತ್ತಾರೆ.



❖ ಎಲ್ಲಾ ವಿವರಗಳನ್ನು ಪರಿಶೀಲಿಸಿದ ನಂತರ ವಿವರಗಳು ಸರಿಯಾಗಿದ್ದಲ್ಲಿ "ಹೌದು" ಎನ್ನುವ ಆಯ್ಕೆ ಮಾಡಿದ ನಂತರ ನಿಮ್ಮ ಶೈಕ್ಷಣಿಕ ವಿವರಗಳು ಎಸ್ ಎಸ್ ಪಿ ತಂತ್ರಾಂಶದ ಪುಟದಲ್ಲಿ ಸ್ವಯಂ ಭರ್ತಿಯಾಗುತ್ತವೆ, ಹಾಗೂ ನಿಮ್ಮ ಕೋರ್ಸ್ ಪ್ರಾರಂಭವಾದ ದಿನಾಂಕವನ್ನು ನೀವು ಆಯ್ಕೆ ಮಾಡಬೇಕು



Select University or Board ವಿಶ್ವವಿದ್ಯಾಲಯ / ಬೋರ್ಡ್ ಅನ್ನು ಆಯ್ಕೆ ಮಾಡಿ * : Acedemy of Higher Educatior )

UG or PG ಯುಜಿ / ಪಿಜಿ * : UG ಯುಜಿ PG ಪಿಜಿ Diploma/ITI/PUC ಪಿಯುಸಿ/ ಡಿಪ್ಲೋಮ/ ಐಟಿಐ

University or Board Registration Number ವಿಶ್ವವಿದ್ಯಾಲಯ / ಬೋರ್ಡ್ ನೋಂದಣಿ ಸಂಖ್ಯೆ * : 14S

Student Name ವಿದ್ಯಾರ್ಥಿಯ ಹೆಸರು * : Darshan K

College Name ಕಾಲೇಜಿನ ಹೆಸರು * : Institute of Technology

Course Name ಕೋರ್ಸ್ ನ ಹೆಸರು * : B.E.

Course Start Date ಕೋರ್ಸ್ ಪ್ರಾರಂಭವಾದ ದಿನಾಂಕ * : dd-mm-yyyy

Course Year ನಿಮ್ಮ ಕೋರ್ಸ್ ನ ವರ್ಷ * : SECOND

Course combination/ Discipline ಕೋರ್ಸ್ ಸಂಯೋಜನೆ * : CIVIL ENGINEERING

Are you Lateral Entry * : Yes ಹೌದು No ಇಲ್ಲ

Mode Of Admission ಪ್ರವೇಶಾತಿ ಪಡೆದ ಪದ್ಧತಿ/ಪ್ರಕಾರ * : -Select-


- -Select-
- Courses which are filled through CAT
- Courses which are filled through KEA/COMED K/AIQ/CAC Counselling
- Management Seat
- University Level Counselling
- Walk-in admission in any Govt College/University

Course Admitted year ಕೋರ್ಸ್ ಗೆ ದಾಖಲಾದ ವರ್ಷ *

SAVE & PROCEED

- ನಂತರ ನೀವು ಪ್ರವೇಶಾತಿ ಪಡೆದ ಪದ್ಧತಿ / ಪ್ರಕಾರವನ್ನು ಆಯ್ಕೆ ಮಾಡಲು, ಆಯ್ಕೆ ಪ್ರಕಾರವನ್ನು ಸೂಚಿಸಬೇಕು. ಹಾಗೂ ಇದರಲ್ಲಿ

    - **ವಿದ್ಯಾರ್ಥಿಯು ಕೌನ್ಸೆಲ್ಲಿಂಗ್ ಮೂಲಕ ಪ್ರವೇಶಾತಿ ಪಡೆದಿದ್ದರೆ**
      ಪ್ರವೇಶಾತಿ ಪ್ರಕಾರ / ಪದ್ಧತಿಯನ್ನು **"Courses which are filled through KEA/Comed-K/ AIQ /CAC Counselling"** ಎಂದು ಆಯ್ಕೆ ಮಾಡಿ ಯುಜಿ /ಪಿಜಿ , ಕೌನ್ಸೆಲ್ಲಿಂಗ್ ಸಂಖ್ಯೆ , ಕೌನ್ಸೆಲ್ಲಿಂಗ್ ಮೂಲಕ ಪ್ರವೇಶಾತಿ ಪಡೆದ ವರ್ಷ & ಕೌನ್ಸೆಲ್ಲಿಂಗ್ ಕೋರ್ಸ್ ವಿವರಗಳನ್ನು ನಮೂದಿಸಿ "**Save & Proceed** " ಆಯ್ಕೆ ಮಾಡಬೇಕು .




    - **ವಿದ್ಯಾರ್ಥಿಯು CAT ಕೌನ್ಸೆಲ್ಲಿಂಗ್ ಮೂಲಕ ಪ್ರವೇಶಾತಿ ಪಡೆದಿದ್ದರೆ**
      ಪ್ರವೇಶಾತಿ ಪ್ರಕಾರ / ಪದ್ಧತಿಯನ್ನು **"Courses which are filled through CAT"** ಎಂದು ಆಯ್ಕೆ ಮಾಡಿ, "**Save & Proceed** " ಆಯ್ಕೆ ಮಾಡಬೇಕು .

    - **ವಿದ್ಯಾರ್ಥಿಯು ಕಾಲೇಜು ಆಡಳಿತ ಮಂಡಳಿಯ ಮೂಲಕ ಪ್ರವೇಶಾತಿ ಪಡೆದಿದ್ದರೆ**
      ಪ್ರವೇಶಾತಿ ಪ್ರಕಾರ / ಪದ್ಧತಿಯನ್ನು **"Management Seat"** ಎಂದು ಆಯ್ಕೆ ಮಾಡಿ, "**Save & Proceed** " ಆಯ್ಕೆ ಮಾಡಬೇಕು.

    - **ವಿದ್ಯಾರ್ಥಿಯು ವಿಶ್ವವಿದ್ಯಾಲಯ ನಡೆಸುವ ಕೌನ್ಸೆಲ್ಲಿಂಗ್ ಮೂಲಕ ಪ್ರವೇಶಾತಿ ಪಡೆದಿದ್ದರೆ**
      ಪ್ರವೇಶಾತಿ ಪ್ರಕಾರ / ಪದ್ಧತಿಯನ್ನು **"University level Counselling"** ಎಂದು ಆಯ್ಕೆ ಮಾಡಿ, "**Save & Proceed** " ಆಯ್ಕೆ ಮಾಡಬೇಕು.


    - **ವಿದ್ಯಾರ್ಥಿಯು ವೃತ್ತಿಪರ ಶಿಕ್ಷಣ ಕೋರ್ಸ್ ಗೆ ಯಾವುದೇ ಸರ್ಕಾರಿ ಕಾಲೇಜಿನಲ್ಲಿ ಕೌನ್ಸೆಲ್ಲಿಂಗ್ ಇಲ್ಲದೆ ಪ್ರವೇಶಾತಿ ಪಡೆದಿದ್ದರೆ**
      ಪ್ರವೇಶಾತಿ ಪ್ರಕಾರ / ಪದ್ಧತಿಯನ್ನು **"Walk-in admission in any Govt College/University"** ಎಂದು ಆಯ್ಕೆ ಮಾಡಿ, "**Save & Proceed** " ಆಯ್ಕೆ ಮಾಡಬೇಕು.

## 2. ಸಿಬಿಎಸ್ ಸಿ / ಐಸಿಎಸ್ ಸಿ /ಐಜಿಸಿಎಸ್ ಸಿ ಮಂಡಳಿಯಲ್ಲಿ 11 / 12 ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯಾಗಿದ್ದಲ್ಲಿ

**ಗಮನಿಸಿ:-**

ನೀವು ವ್ಯಾಸಂಗ ಮಾಡುತ್ತಿರುವ ಶೈಕ್ಷಣಿಕ ಸಂಸ್ಥೆಯಿಂದ ವ್ಯಾಸಂಗ ಧೃಡೀಕರಣ ಪತ್ರವನ್ನು ಪಡೆದು ಅದನ್ನು ಇ-ಧೃಡೀಕರಣ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಿ ನಂತರ ಪ್ರಾಯೋಜಿಕ ಕಲ್ಯಾಣ ಇಲಾಖೆಯ (Concerned Welfare Department District Officer) ಜಿಲ್ಲಾ ಅಧಿಕಾರಿಗಳಿಂದ ಇ-ಧೃಡೀಕರಣ ಅನುಮೋದನೆ ಮಾಡಿಸಬೇಕು


**ಅರ್ಜಿ ಸಲ್ಲಿಸುವ ವಿಧಾನ:-**




- ನೀವು ಹೊರ ರಾಜ್ಯದಲ್ಲಿ ಇರುವ ವಿಶ್ವವಿದ್ಯಾಲಯ / ಶೈಕ್ಷಣಿಕ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವಿರಾ ಎನ್ನುವ ಪ್ರಶ್ನೆಗೆ **"ಇಲ್ಲ"** ಎಂದು ಆಯ್ಕೆ ಮಾಡಬೇಕು.
- ನೀವು ಸಿಬಿಎಸ್ ಸಿ / ಐಸಿಎಸ್ ಸಿ /ಐಜಿಸಿಎಸ್ ಸಿ ಮಂಡಳಿಯಲ್ಲಿ 11 / 12 ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವಿರಾ , ಪ್ರಶ್ನೆಗೆ **"ಹೌದು "**ಎಂದು ಆಯ್ಕೆ ಮಾಡಿ.
- ನೀವು ವ್ಯಾಸಂಗ ಮಾಡುತ್ತಿರುವ ಶೈಕ್ಷಣಿಕ ಸಂಸ್ಥೆಯಿಂದ ವ್ಯಾಸಂಗ ಧೃಡೀಕರಣ ಪತ್ರವನ್ನು ಪಡೆದು ಅದನ್ನು ಇ-ಧೃಡೀಕರಣ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಿ ನಂತರ ಪ್ರಾಯೋಜಿಕ ಕಲ್ಯಾಣ ಇಲಾಖೆಯ(Concerned Welfare Department District Officer) ಜಿಲ್ಲಾ ಅಧಿಕಾರಿಗಳಿಂದ ಇ-ಧೃಡೀಕರಣ ಅನುಮೋದನೆ ಮಾಡಿಸಬೇಕು ಹಾಗೂ ಅನುಮೋದನೆ ಮಾಡಿದ ಇ-ಧೃಡೀಕರಣ ಸಂಖ್ಯೆಯನ್ನು ನಮೂದಿಸಿ "Get Data " ಆಯ್ಕೆ ಮಾಡಿ ಪ್ರದರ್ಶಿತ ವಿವರಗಳು ಸರಿಯಾಗಿವೆಯೇ ಎಂದು ಪರಿಶೀಲಿಸಿಕೊಂಡು "Save & Proceed " ಆಯ್ಕೆ ಮಾಡಬೇಕು .

## 3. ವೃತ್ತಿಪರ ಶಿಕ್ಷಣಕ್ಕೆ ಕೌನ್ಸೆಲ್ಲಿಂಗ್ ಮೂಲಕ ಪ್ರವೇಶಾತಿ ಪಡೆದು ವ್ಯಾಸಂಗ ಮಾಡುತ್ತಿರುವ ಪ್ರಥಮ ( ಅಥವಾ ಡಿಪ್ಲೋಮ ಲ್ಯಾಟರಲ್ ಎಂಟ್ರಿ ಮೂಲಕ ದ್ವಿತೀಯ) ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿಧ್ಯಾರ್ಥಿಯಾಗಿದ್ದಲ್ಲಿ.

**ಗಮನಿಸಿ:-** ವಿದ್ಯಾರ್ಥಿಯು ವೃತ್ತಿಪರ ಶಿಕ್ಷಣಕ್ಕೆ ಕೌನ್ಸೆಲ್ಲಿಂಗ್ ಮೂಲಕ ಪ್ರವೇಶಾತಿ ಪಡೆದು ಪ್ರಸ್ತುತ **ಪ್ರಥಮ ( ಅಥವಾ ಡಿಪ್ಲೋಮ ಲ್ಯಾಟರಲ್ ಎಂಟ್ರಿ ಮೂಲಕ ದ್ವಿತೀಯ)** ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದಲ್ಲಿ ವಿದ್ಯಾರ್ಥಿಯು ಕೌನ್ಸೆಲ್ಲಿಂಗ್ ವಿವರಗಳನ್ನು ನಮೂದಿಸುವ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.


PRESENT YEAR STUDY DETAILS / ಪ್ರಸ್ತುತ ವರ್ಷದ ಶೈಕ್ಷಣಿಕ ವಿವರಗಳು

Are you studying in any University/Institute located outside Karnataka? ನೀವು ಹೊರ ರಾಜ್ಯದಲ್ಲಿ ಇರುವ ವಿಶ್ವವಿದ್ಯಾಲಯ/ಶೈಕ್ಷಣಿಕ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವಿರಾ? * — Yes ಹೌದು / No ಇಲ್ಲ

Are you studying 11th or 12th in CBSE/ICSE/IGCSE board* — Yes ಹೌದು / No ಇಲ್ಲ

Are you studying in any professional course ? ನೀವು ವೃತ್ತಿಪರ ಕೋರ್ಸ್ ನಲ್ಲಿ ವ್ಯಾಸಂಗ ಮಾಡುತ್ತಿದೀರ.?* — Yes ಹೌದು / No ಇಲ್ಲ — Professional Course List

Mode Of Admission ಪ್ರವೇಶಾತಿ ಪಡೆದ ಪದ್ಧತಿ/ಪ್ರಕಾರ * — Admission through Counselling by KEA/COMED-K/CAC

Select Counselling Authority / Agency ಕೌನ್ಸೆಲ್ಲಿಂಗ್ ಪ್ರಾಧಿಕಾರವನ್ನು ಆಯ್ಕೆ ಮಾಡಿ * — KEA / NEET

COUNSELLING DATA

UG or PG ಯುಜಿ / ಪಿಜಿ* — UG / PG

Counselling Number ಕೌನ್ಸೆಲ್ಲಿಂಗ್ ಸಂಖ್ಯೆ * — Please input only letters and numbers

Counselling Admission Year ಕೌನ್ಸೆಲ್ಲಿಂಗ್ ಮೂಲಕ ಪ್ರವೇಶಾತಿ ಪಡೆದ ವರ್ಷ* — Counselling Admission Year

Counselling Course ಕೌನ್ಸೆಲ್ಲಿಂಗ್ ಕೋರ್ಸ್* — -Select-

GET DATA RESET

## ಅರ್ಜಿ ಸಲ್ಲಿಸುವ ವಿಧಾನ:-


- ನೀವು ಹೊರ ರಾಜ್ಯದಲ್ಲಿ ಇರುವ ವಿಶ್ವವಿದ್ಯಾಲಯ / ಶೈಕ್ಷಣಿಕ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವಿರಾ ಎನ್ನುವ ಪ್ರಶ್ನೆಗೆ **"ಇಲ್ಲ"** ಎಂದು ಆಯ್ಕೆ ಮಾಡಬೇಕು.
- ನೀವು ಸಿಬಿಎಸ್ ಸಿ / ಐಸಿಎಸ್ ಸಿ /ಐಜಿಸಿಎಸ್ ಸಿ ಮಂಡಳಿಯಲ್ಲಿ 11 / 12 ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವಿರಾ , ಪ್ರಶ್ನೆಗೆ **"ಇಲ್ಲ"** ಎಂದು ಆಯ್ಕೆ ಮಾಡಿ.
- ನೀವು ವೃತ್ತಿಪರ ಕೋರ್ಸ್ ನಲ್ಲಿ ವ್ಯಾಸಂಗ ಮಾಡುತ್ತಿರುವಿರಾ, ಪ್ರಶ್ನೆಗೆ **"ಹೌದು"** ಆಯ್ಕೆ ಮಾಡಿ.
- ಪ್ರವೇಶಾತಿ ಪಡೆದ ಪದ್ಧತಿ / ಪ್ರಕಾರಕ್ಕೆ **"Admission through Counselling by KEA/Comed-K/CAC"** ಆಯ್ಕೆ ಮಾಡಿ.
- ಯುಜಿ /ಪಿಜಿ , ಕೌನ್ಸೆಲ್ಲಿಂಗ್ ಸಂಖ್ಯೆ , ಕೌನ್ಸೆಲ್ಲಿಂಗ್ ಮೂಲಕ ಪ್ರವೇಶಾತಿ ಪಡೆದ ವರ್ಷ & ಕೌನ್ಸೆಲ್ಲಿಂಗ್ ಕೋರ್ಸ್ ವಿವರಗಳನ್ನು ನಮೂದಿಸಿ "Get Data " ಆಯ್ಕೆ ಮಾಡಿ **ಪ್ರದರ್ಶಿತ ವಿವರಗಳು ಸರಿಯಾಗಿವೆಯೇ ಎಂದು ಪರಿಶೀಲಿಸಿಕೊಂಡು** "**Save & Proceed** " ಆಯ್ಕೆ ಮಾಡಬೇಕು .

## 4. <u>ಕರ್ನಾಟಕದ ಹೊರರಾಜ್ಯದಲ್ಲಿ ಇರುವ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯಾಗಿದ್ದಲ್ಲಿ</u>

**<u>ಗಮನಿಸಿ:-</u>**

ಕರ್ನಾಟಕದ ಹೊರರಾಜ್ಯದಲ್ಲಿ ಇರುವ ವಿಶ್ವವಿದ್ಯಾಲಯ / ಶೈಕ್ಷಣಿಕ ಮಂಡಳಿಯಲ್ಲಿ ಪ್ರವೇಶಾತಿ ಪಡೆದು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು, ತಮ್ಮ ಶೈಕ್ಷಣಿಕ (ಬೋನಾಫೈಡ್ ) ವಿವರಗಳನ್ನು ಇ-ಧೃಡೀಕರಣ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಿ ನಂತರ ಪ್ರಾಯೋಜಿಕ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳಿಂದ ಅನುಮೋದನೆ ಮಾಡಿಸಿ, ಅನುಮೋದನೆ ಮಾಡಿದ ಇ-ಧೃಡೀಕರಣ ಸಂಖ್ಯೆಯನ್ನು ಸ್ಟೆಪ್-3 ರಲ್ಲಿ ನಮೂದಿಸಬೇಕು.

## <u>ಅರ್ಜಿ ಸಲ್ಲಿಸುವ ವಿಧಾನ:-</u>


ENTER COLLEGE / COURSE DETAILS / ಕಾಲೇಜು / ಕೋರ್ಸ್ ನ ವಿವರಗಳನ್ನು ನಮೂದಿಸಿ

PRESENT YEAR STUDY DETAILS / ಪ್ರಸ್ತುತ ವರ್ಷದ ಶೈಕ್ಷಣಿಕ ವಿವರಗಳು

Are you studying in any University/Institute located outside Karnataka? ನೀವು ಹೊರ ರಾಜ್ಯದಲ್ಲಿ ಇರುವ ವಿಶ್ವವಿದ್ಯಾಲಯ/ಶೈಕ್ಷಣಿಕ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವಿರಾ? * — Yes ಹೌದು / No ಇಲ್ಲ

Select State ರಾಜ್ಯವನ್ನು ಆಯ್ಕೆ ಮಾಡಿ * : -Select-

Select University or Board ವಿಶ್ವವಿದ್ಯಾಲಯ / ಬೋರ್ಡ್ ಅನ್ನು ಆಯ್ಕೆ ಮಾಡಿ * : -Select-

College Name ಕಾಲೇಜಿನ ಹೆಸರು * : -Select-

Course Name ಕೋರ್ಸ್ ನ ಹೆಸರು * : -Select-

Course Start Date ಕೋರ್ಸ್ ಪ್ರಾರಂಭವಾದ ದಿನಾಂಕ * : dd-mm-yyyy

Course Year ನಿಮ್ಮ ಕೋರ್ಸ್ ನ ವರ್ಷ* : -Select-

Course combination/ Discipline ಕೋರ್ಸ್ ಸಂಯೋಜನೆ* :

Course Admitted year ಕೋರ್ಸ್ ಗೆ ದಾಖಲಾದ ವರ್ಷ * :

SAVE & PROCEED

- ❖ ನೀವು ಹೊರ ರಾಜ್ಯದಲ್ಲಿ ಇರುವ ವಿಶ್ವವಿದ್ಯಾಲಯ / ಶೈಕ್ಷಣಿಕ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವಿರಾ ಎನ್ನುವ ಪ್ರಶ್ನೆಗೆ **"ಹೌದು"** ಎಂದು ಆಯ್ಕೆ ಮಾಡಬೇಕು.
- ❖ ವಿದ್ಯಾರ್ಥಿಯು ವ್ಯಾಸಂಗ ಮಾಡುತ್ತಿರುವ **ರಾಜ್ಯ, ವಿಶ್ವವಿದ್ಯಾಲಯ /ಶೈಕ್ಷಣಿಕ ಮಂಡಳಿ, ಕಾಲೇಜಿನ ಹೆಸರು, ಕೋರ್ಸ್ ನ ಹೆಸರು, ಕೋರ್ಸ್ ಪ್ರಾರಂಭವಾದ ದಿನಾಂಕ, ಕೋರ್ಸ್ ನಲ್ಲಿ ವ್ಯಾಸಂಗ ಮಾಡುತ್ತಿರುವ ವರ್ಷ, ಕೋರ್ಸ್ ಸಂಯೋಜನೆ (ಡಿಸಿಪ್ಲಿನ್ ) & ಕೋರ್ಸ್ ಗೆ ದಾಖಲಾದ ವರ್ಷ**. ಈ ಎಲ್ಲಾ ವಿವರಗಳನ್ನು ಆಯ್ಕೆ ಮಾಡಿ ಸರಿಯಾಗಿದೆಯೇ ಎಂದು ಪರಿಶೀಲಿಸಿಕೊಂಡು "Save & Proceed " ಆಯ್ಕೆ ಮಾಡಬೇಕು.

## ಹಿಂದಿನ ವರ್ಷ ತೇರ್ಗಡೆಯಾದ ವಿವರಗಳು (Previous Year Passed Details)

**ಗಮನಿಸಿ :-**

ಹಿಂದಿನ ವರ್ಷ ಎಂದರೆ, ವಿದ್ಯಾರ್ಥಿಯು ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ತರಗತಿಯ ಹಿಂದಿನ ವರ್ಷದ ತರಗತಿ ಎಂದು ಅರ್ಥ, ಇದರಲ್ಲಿ ..

- ವಿದ್ಯಾರ್ಥಿಯು ಪ್ರಥಮ ವರ್ಷದ ಪಿಯುಸಿ / ಡಿಪ್ಲೋಮ / ಐಟಿಐ ನಲ್ಲಿ ವ್ಯಾಸಂಗ ಮಾಡುತ್ತಿದ್ದರೆ, 10 ನೇ ತರಗತಿಯನ್ನು ಹಿಂದಿನ ವರ್ಷ ಎಂದು ಪರಿಗಣಿಸಬೇಕು.

- ವಿದ್ಯಾರ್ಥಿಯು ಪ್ರಥಮ ವರ್ಷದ ಯಾವುದೇ ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದರೆ, ಪಿಯುಸಿ ದ್ವಿತೀಯ ವರ್ಷವನ್ನು ಹಿಂದಿನ ವರ್ಷ ಎಂದು ಪರಿಗಣಿಸಬೇಕು.


- ವಿದ್ಯಾರ್ಥಿಯು ದ್ವಿತೀಯ ವರ್ಷದ ಯಾವುದೇ ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದರೆ, ಪದವಿಯ ಪ್ರಥಮ ವರ್ಷವನ್ನು ಹಿಂದಿನ ವರ್ಷ ಎಂದು ಪರಿಗಣಿಸಬೇಕು.

- ವಿದ್ಯಾರ್ಥಿಯು ಡಿಪ್ಲೋಮ ಲ್ಯಾಟರಲ್ ಎಂಟ್ರಿ ಮೂಲಕ ಇಂಜಿನಿಯರಿಂಗ್ ನ ದ್ವಿತೀಯ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರೆ, ಡಿಪ್ಲೋಮ ತೃತೀಯ ವರ್ಷವನ್ನು ಹಿಂದಿನ ವರ್ಷ ಎಂದು ಪರಿಗಣಿಸಬೇಕು.

- ವಿದ್ಯಾರ್ಥಿಯು ಯಾವುದೇ ಸ್ನಾತಕೋತ್ತರ ಪದವಿಯ ಪ್ರಥಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರೆ, ಪದವಿಯ ಅಂತಿಮ (3 ನೇ ಅಥವಾ 4 ನೇ ಅಥವಾ 5 ನೇ ವರ್ಷ) ವರ್ಷವನ್ನು ಹಿಂದಿನ ವರ್ಷ ಎಂದು ಪರಿಗಣಿಸಬೇಕು.

- ವಿದ್ಯಾರ್ಥಿಯು ಹಿಂದಿನ ವರ್ಷದಲ್ಲಿ ಕರ್ನಾಟಕದ ಹೊರರಾಜ್ಯದಲ್ಲಿ ಇರುವ ವಿಶ್ವವಿದ್ಯಾಲಯ / ಶೈಕ್ಷಣಿಕ ಮಂಡಳಿಯಲ್ಲಿ ಪ್ರವೇಶಾತಿ ಪಡೆದು ವ್ಯಾಸಂಗ ಮಾಡಿದ್ದರೆ ಅಂತಹ ವಿದ್ಯಾರ್ಥಿಗಳು, ತಮ್ಮ ಶೈಕ್ಷಣಿಕ (ಬೋನಾಫೈಡ್ ) ವಿವರ ಮತ್ತು ಹಿಂದಿನ ವರ್ಷದ ಅಂಕಪಟ್ಟಿಯನ್ನು ಇ-ಧೃಡೀಕರಣ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಿ, ನಂತರ ಸಂಬಂಧಪಟ್ಟ ಪ್ರಾಯೋಜಿಕ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳಿಂದ ಅನುಮೋದನೆ ಮಾಡಿಸಿ, ಅನುಮೋದನೆ ಮಾಡಿದ ಇ-ಧೃಡೀಕರಣ ಸಂಖ್ಯೆಯನ್ನು ಸ್ಟೆಪ್-2 ರಲ್ಲಿ ನಮೂದಿಸಬೇಕು.

1. <u>ಹಿಂದಿನ ವರ್ಷ ಕರ್ನಾಟಕ ರಾಜ್ಯದಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ವಿಧಾನ:-</u>



PREVIOUS YEAR PASSED DETAILS / ಹಿಂದಿನ ವರ್ಷ ತೇರ್ಗಡೆಯಾದ ವಿವರಗಳು

PREVIOUS YEAR PASSED DETAILS / ಹಿಂದಿನ ವರ್ಷ ತೇರ್ಗಡೆಯಾದ ವಿವರಗಳು

(ಉದಾ: ಪ್ರಸ್ತುತ ವರ್ಷ ಪದವಿ 2 ನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರೆ, ಪದವಿಯ ಮೊದಲನೇ ವರ್ಷದಲ್ಲಿ ತೇರ್ಗಡೆಯಾದ ವಿವರಗಳನ್ನು ನೀಡುವುದು)
(Example: If you are in Degree 2nd year then Degree 1st Year Result details to be Provided)

(ಉದಾ: ಪ್ರಸ್ತುತ ವರ್ಷ ಪದವಿ 1ನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರೆ, ದ್ವಿತೀಯ ಪಿಯುಸಿ ಯಲ್ಲಿ ತೇರ್ಗಡೆಯಾದ ವಿವರಗಳನ್ನು ನೀಡುವುದು)
(Example: If you are in Degree 1st Year then PUC 2nd Year Result Details to be Provided)

(ಉದಾ: ಪ್ರಸ್ತುತ ವರ್ಷ ಇಂಜಿನಿಯರಿಂಗ್ ಗೆ ಡಿಪ್ಲೋಮ ಲೇಟರಲ್ ಎಂಟ್ರಿ ಮೂಲಕ ಪ್ರವೇಶಾತಿ ಪಡೆದಿದ್ದು ವ್ಯಾಸಂಗ ಮಾಡುತ್ತಿದ್ದರೆ ಡಿಪ್ಲೋಮ ಅಂತಿಮ ವರ್ಷದಲ್ಲಿ ತೇರ್ಗಡೆಯಾದ ವಿವರಗಳನ್ನು ನೀಡುವುದು)
(Example: If you are in BE 2nd Year Lateral Entry then Diploma Final Year Details to be Provided)

(ಉದಾ: ಪ್ರಸ್ತುತ ವರ್ಷ ಸ್ನಾತಕೋತ್ತರ ಪದವಿ (ಎಂ.ಎ)1ನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರೆ, ಪದವಿ ಅಂತಿಮ (ಬಿಎ )ವರ್ಷದಲ್ಲಿ ತೇರ್ಗಡೆಯಾದ ವಿವರಗಳನ್ನು ನೀಡುವುದು)
(Example: If you are in M.A 1st Year then B.A 3rd Year Result details to be Provided)

(ಉದಾ: ಪ್ರಸ್ತುತ ವರ್ಷ ಸ್ನಾತಕೋತ್ತರ ಪದವಿ (ಎಂ.ಎ)2 ನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರೆ, ಸ್ನಾತಕೋತ್ತರ ಪದವಿ (ಎಂ.ಎ) ಮೊದಲನೇ ವರ್ಷದಲ್ಲಿ ತೇರ್ಗಡೆಯಾದ ವಿವರಗಳನ್ನು ನೀಡುವುದು)
(Example: If you are in M.A 2nd year then M.A 1st Year Year Result details to be Provided)

COURSE DETAILS / ಕೋರ್ಸ್ ನ ವಿವರಗಳು

Semester or Annual: ಸೆಮಿಸ್ಟರ್ / ವಾರ್ಷಿಕ * — ○Semester ಸೆಮಿಸ್ಟರ್ ◉Annual ವಾರ್ಷಿಕ

Marks or CGPA: ಅಂಕಗಳು / ಸಿಜಿಪಿಎ * — ◉Marks ಅಂಕಗಳು ○CGPA ಸಿಜಿಪಿಎ

Whether you have completed your previous qualifying course from any of the Universities outside Karnataka? ನೀವು ಹಿಂದಿನ ವರ್ಷ ಕರ್ನಾಟಕದ ಹೊರ ರಾಜ್ಯದಲ್ಲಿನ ವಿಶ್ವವಿದ್ಯಾಲಯ / ಶೈಕ್ಷಣಿಕ ಮಂಡಳಿಯಲ್ಲಿ ವ್ಯಾಸಂಗ ಮಾಡಿದ್ದೀರಾ ? * — ○Yes ಹೌದು ◉No ಇಲ್ಲ

Select District ಜಿಲ್ಲೆಯನ್ನು ಆಯ್ಕೆ ಮಾಡಿ* — --SELECT District--

Select Taluk ತಾಲೂಕನ್ನು ಆಯ್ಕೆ ಮಾಡಿ*

Select Previous year University ಹಿಂದಿನ ವರ್ಷ ವ್ಯಾಸಂಗ ಮಾಡಿದ ವಿಶ್ವವಿದ್ಯಾಲಯವನ್ನು ಆಯ್ಕೆ ಮಾಡಿ *

Select Previous year College ಹಿಂದಿನ ವರ್ಷ ವ್ಯಾಸಂಗ ಮಾಡಿದ ಕಾಲೇಜನ್ನು ಆಯ್ಕೆ ಮಾಡಿ *

Please Select Previous Year Course ಹಿಂದಿನ ವರ್ಷ ವ್ಯಾಸಂಗ ಮಾಡಿದ ಕೋರ್ಸ್ ಅನ್ನು ಆಯ್ಕೆ ಮಾಡಿ *

Please Select Previous Year Discipline*

Select Previous Course Year ಹಿಂದಿನ ವರ್ಷ ವ್ಯಾಸಂಗ ಮಾಡಿದ ಕೋರ್ಸ್ ನ ವರ್ಷವನ್ನು ಆಯ್ಕೆ ಮಾಡಿ*

Enter Previous Year Registration Number * — Please input only letters and numbers

Previous Pass Year * — Please input only numbers

No. of years studied in the selected university, college & course ಆಯ್ಕೆ ಮಾಡಿದ ವಿಶ್ವವಿದ್ಯಾಲಯದಲ್ಲಿ ಎಷ್ಟು ವರ್ಷ ವ್ಯಾಸಂಗ ಮಾಡಿದ್ದೀರಿ*

Pass/Fail? ಉತ್ತೀರ್ಣ/ಅನುತ್ತೀರ್ಣ ?* — ◉Pass ಉತ್ತೀರ್ಣ ○Fail ಅನುತ್ತೀರ್ಣ

Promoted ?* — ◉Yes ಹೌದು ○No ಇಲ್ಲ


Maximum Marks ಗರಿಷ್ಠ ಅಂಕಗಳು * — Please input only numbers

Total Marks Obtained ಒಟ್ಟು ಪಡೆದ ಅಂಕಗಳು * — Please input only numbers

SAVE & PROCEED

- ವಾರ್ಷಿಕ / ಸೆಮಿಸ್ಟರ್ ಪದ್ದತಿಯನ್ನು ಆಯ್ಕೆ ಮಾಡಬೇಕು
- ಅಂಕಗಳು / ಸಿಜಿಪಿಎ ವಿಧಾನವನ್ನು ಆಯ್ಕೆ ಮಾಡಬೇಕು
- ನೀವು ಹಿಂದಿನ ವರ್ಷ ಕರ್ನಾಟಕದ ಹೊರ ರಾಜ್ಯದಲ್ಲಿ ವಿಶ್ವವಿದ್ಯಾಲಯ / ಶೈಕ್ಷಣಿಕ ಮಂಡಳಿಯಲ್ಲಿ ವ್ಯಾಸಂಗ ಮಾಡಿದ್ದೀರಾ . ಇದಕ್ಕೆ **"ಇಲ್ಲ"** ಎನ್ನುವ ಆಯ್ಕೆಯನ್ನು ಮಾಡಿ
- ನಂತರ ವ್ಯಾಸಂಗ ಮಾಡಿದ ಕಾಲೇಜಿನ ಜಿಲ್ಲೆ,
- ಕಾಲೇಜಿನ ತಾಲೂಕು,
- ವಿಶ್ವವಿದ್ಯಾಲಯ / ಶೈಕ್ಷಣಿಕ ಮಂಡಳಿ ,
- ಕಾಲೇಜಿನ ಹೆಸರು,
- ಕೋರ್ಸ್,
- ಡಿಸಿಪ್ಲಿನ್,
- ಕೋರ್ಸ್ ನ ವರ್ಷ,
- ನೋಂದಣಿ ಸಂಖ್ಯೆ,
- ತೇರ್ಗಡೆಯಾದ ವರ್ಷ,
- ಮುಂದಿನ ತರಗತಿಯಲ್ಲಿ ವ್ಯಾಸಂಗ ಮಾಡಲು ತೇರ್ಗಡೆ ಹೊಂದಿದ್ದಲ್ಲಿ ಒಟ್ಟು ಅಂಕಗಳು
- ಪಡೆದ ಅಂಕಗಳನ್ನು ನಮೂದಿಸಿ ಎಲ್ಲಾ ವಿವರಗಳು ಸರಿಯಾಗಿವೆಯೇ ಎಂದು ಪರಿಶೀಲಿಸಿಕೊಂಡು ನಂತರ **"Save & Proceed "** ಮಾಡಬೇಕು.

## 2. ಹಿಂದಿನ ವರ್ಷ ಕರ್ನಾಟಕದ ಹೊರ ರಾಜ್ಯದಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ವಿಧಾನ:-


Whether you have completed your previous qualifying course from any of the Universities outside Karnataka? ನೀವು ಹಿಂದಿನ ವರ್ಷ ಕರ್ನಾಟಕದ ಹೊರ ರಾಜ್ಯದಲ್ಲಿನ ವಿಶ್ವವಿದ್ಯಾಲಯ / ಶೈಕ್ಷಣಿಕ ಮಂಡಳಿಯಲ್ಲಿ ವ್ಯಾಸಂಗ ಮಾಡಿದ್ದೀರಾ ? * — Yes ಹೌದು / No ಇಲ್ಲ

Pass/Fail? ಉತ್ತೀರ್ಣ/ಅನುತ್ತೀರ್ಣ ?* — Pass ಉತ್ತೀರ್ಣ / Fail ಅನುತ್ತೀರ್ಣ

Promoted ?* — Yes ಹೌದು / No ಇಲ್ಲ

Select State ರಾಜ್ಯವನ್ನು ಆಯ್ಕೆ ಮಾಡಿ *

Select Previous year University ಹಿಂದಿನ ವರ್ಷ ವ್ಯಾಸಂಗ ಮಾಡಿದ ವಿಶ್ವವಿದ್ಯಾಲಯವನ್ನು ಆಯ್ಕೆ ಮಾಡಿ *

Select Previous year College ಹಿಂದಿನ ವರ್ಷ ವ್ಯಾಸಂಗ ಮಾಡಿದ ಕಾಲೇಜನ್ನು ಆಯ್ಕೆ ಮಾಡಿ *

Please Select Previous Year Course ಹಿಂದಿನ ವರ್ಷ ವ್ಯಾಸಂಗ ಮಾಡಿದ ಕೋರ್ಸ್ ಅನ್ನು ಆಯ್ಕೆ ಮಾಡಿ *


Select Previous Course Year ಹಿಂದಿನ ವರ್ಷ ವ್ಯಾಸಂಗ ಮಾಡಿದ ಕೋರ್ಸ್ ನ ವರ್ಷವನ್ನು ಆಯ್ಕೆ ಮಾಡಿ *

No. of years studied in the selected university, college & course ಆಯ್ಕೆ ಮಾಡಿದ ವಿಶ್ವವಿದ್ಯಾಲಯದಲ್ಲಿ ಎಷ್ಟು ವರ್ಷ ವ್ಯಾಸಂಗ ಮಾಡಿದ್ದೀರಿ *

Enter Annual E-AttestationId — E-Attestation Id — GET DATA — RESET

- ❖ ನೀವು ಹೊರ ರಾಜ್ಯದಲ್ಲಿ ಇರುವ ವಿಶ್ವವಿದ್ಯಾಲಯ / ಶೈಕ್ಷಣಿಕ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವಿರಾ ಎನ್ನುವ ಪ್ರಶ್ನೆಗೆ **"ಹೌದು"** ಎಂದು ಆಯ್ಕೆ ಮಾಡಬೇಕು.
- ❖ ವಿದ್ಯಾರ್ಥಿಯು ವ್ಯಾಸಂಗ ಮಾಡುತ್ತಿರುವ **ರಾಜ್ಯ, ವಿಶ್ವವಿದ್ಯಾಲಯ /ಶೈಕ್ಷಣಿಕ ಮಂಡಳಿ, ಕಾಲೇಜಿನ ಹೆಸರು, ಕೋರ್ಸ್ ನ ಹೆಸರು, ಕೋರ್ಸ್ ನಲ್ಲಿ ವ್ಯಾಸಂಗ ಮಾಡುತ್ತಿರುವ ವರ್ಷ & ಕೋರ್ಸ್ ಸಂಯೋಜನೆ (ಡಿಸಿಪ್ಲಿನ್ )**. ಈ ಎಲ್ಲಾ ವಿವರಗಳನ್ನು ಆಯ್ಕೆ ಮಾಡಬೇಕು.
- ❖ ಹಿಂದಿನ ವರ್ಷ ಹೊರ ರಾಜ್ಯದಲ್ಲಿ ವ್ಯಾಸಂಗ ಮಾಡಿರುವ ಶೈಕ್ಷಣಿಕ (ಬೋನಾಫೈಡ್ ) ವಿವರ ಮತ್ತು ಹಿಂದಿನ ವರ್ಷದ ಅಂಕಪಟ್ಟಿಯನ್ನು ಇ-ಧೃಡೀಕರಣ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಿ, ನಂತರ ಸಂಬಂಧಪಟ್ಟ ಪ್ರಾಯೋಜಿಕ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳಿಂದ (Concerned Welfare Department District officer) ಅನುಮೋದನೆ ಮಾಡಿಸಿ, ಅನುಮೋದನೆ ಮಾಡಿದ **ಇ-ಧೃಡೀಕರಣ ಸಂಖ್ಯೆಯನ್ನು ಸ್ಟೆಪ್-2** ರಲ್ಲಿ ನಮೂದಿಸಿ "Get Data " ಆಯ್ಕೆ ಮಾಡಿ ಪ್ರದರ್ಶಿತ ವಿವರಗಳು ಸರಿಯಾಗಿವೆಯೇ ಎಂದು ಪರಿಶೀಲಿಸಿಕೊಂಡು "Save & Proceed " ಆಯ್ಕೆ ಮಾಡಬೇಕು.

## ಸ್ಟೆಪ್-3 : ಇ-ದೃಢೀಕರಣ ವಿವರಗಳು (E-Attestation Details)



**ಈ ಕೆಳಗೆ ವಿವರಿಸಲಾಗಿರುವ ದಾಖಲೆಗಳಿಗೆ ಇ-ಧೃಡೀಕರಣ ಅನುಮೋದನೆ ಮಾಡಿಸಬೇಕು. ಇದಕ್ಕಾಗಿ ,**
**ಇ-ಧೃಡೀಕರಣ ತಂತ್ರಾಂಶದಲ್ಲಿ ದಾಖಲೆಯನ್ನು ಅಪ್ಲೋಡ್ ಮಾಡಿ ಅದನ್ನು (ತಂತ್ರಾಂಶದಲ್ಲಿ ಇ-ಧೃಡೀಕರಣ ಅಧಿಕಾರಿಗಳ ಹೆಸರು ಮತ್ತು ಮೊಬೈಲ್ ಸಂಖ್ಯೆಯನ್ನು ನೀಡಲಾಗಿರುತ್ತದೆ ) ಇ-ಧೃಡೀಕರಣ ಅಧಿಕಾರಿಗಳನ್ನು ಮೂಲ ಧಾಖಲೆಗಳ ಸಮೇತ ಸಂಪರ್ಕಿಸಿ ಧಾಖಲೆಗಳನ್ನು ಇ-ಧೃಡೀಕರಣ ತಂತ್ರಾಂಶದಲ್ಲಿ ಅನುಮೋದನೆ ಮಾಡಿಸಿಕೊಳ್ಳಬೇಕು**

- ❖ 10 ನೇ ತರಗತಿ ವಿದ್ಯಾಭ್ಯಾಸವನ್ನು, ಕರ್ನಾಟಕದ ಹೊರ ರಾಜ್ಯದಲ್ಲಿ / IGCSE ಶೈಕ್ಷಣಿಕ ಮಂಡಳಿಯಲ್ಲಿ /NIOS ಮಂಡಳಿಯಲ್ಲಿ / 2004 ಕ್ಕು ಮೊದಲು ತೇರ್ಗಡೆ ಆಗಿರುವ ವಿದ್ಯಾರ್ಥಿಗಳು 10 ನೇ ತರಗತಿ ಅಂಕಪಟ್ಟಿಯನ್ನು ಇ-ಧೃಡೀಕರಣ ಮಾಡಿಸಬೇಕು.

- ❖ 11 /12 ನೇ ತರಗತಿ ವಿದ್ಯಾಭ್ಯಾಸವನ್ನು ಕರ್ನಾಟಕದ ಹೊರ ರಾಜ್ಯದಲ್ಲಿ/ CBSE /ICSE ಮಂಡಳಿಯಲ್ಲಿ / 2009 ಕ್ಕು ಮೊದಲು ತೇರ್ಗಡೆ ಆಗಿರುವ ವಿದ್ಯಾರ್ಥಿಗಳು 11 /12 ನೇ ತರಗತಿ ಅಂಕಪಟ್ಟಿಯನ್ನು ಇ-ಧೃಡೀಕರಣ ಮಾಡಿಸಬೇಕು.

- ❖ ರಕ್ಷಣಾ ಸಿಬ್ಬಂದಿಯವರ ಮಕ್ಕಳು Kin of Defence ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುತ್ತಿದ್ದಲ್ಲಿ ಡಿಫೆನ್ಸ್ ಧಾಖಲೆಗಳನ್ನು ಇ-ಧೃಡೀಕರಣ ಮಾಡಿಸಬೇಕು.

- ❖ ವೈದ್ಯಕೀಯ ಶಿಕ್ಷಣ ಇಲಾಖೆ/ ತಾಂತ್ರಿಕ ಶಿಕ್ಷಣ ಇಲಾಖೆ / ಕಾಲೇಜು ಶಿಕ್ಷಣ ಇಲಾಖೆ / ಆಯುಷ್ ಇಲಾಖೆಯವರು ನೀಡುವ ವಿದ್ಯಾರ್ಥಿವೇತನಕ್ಕೆ ಅರ್ಹರಿರುವ ವಿದ್ಯಾರ್ಥಿಗಳು ತಮ್ಮ ತಂದೆ - ತಾಯಿ / ಪೋಷಕರ ವಾರ್ಷಿಕ ವರಮಾನ ದಾಖಲೆಯನ್ನು ಇ-ಧೃಡೀಕರಣ ಮಾಡಿಸಬೇಕು.

- ❖ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸ್ಟೈಫಂಡ್ ಮತ್ತು ನಾನ್ ಪ್ರಾಕ್ಟಿಸಿಂಗ್ ಪ್ರಮಾಣ ಪತ್ರವನ್ನು ಇ-ಧೃಡೀಕರಣ ಮಾಡಿಸಬೇಕು.

- ❖ ಪ್ರಸ್ತುತ ವರ್ಷದಲ್ಲಿ ಕರ್ನಾಟಕ ರಾಜ್ಯದ ಹೊರಗೆ ಇರುವ ವಿಶ್ವವಿದ್ಯಾಲಯ / ಶೈಕ್ಷಣಿಕ ಮಂಡಳಿಯ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದರೆ (SC & ST ವಿದ್ಯಾರ್ಥಿಗಳು ) ಅಂತಹ ವಿದ್ಯಾರ್ಥಿಗಳು ಕಾಲೇಜಿನಿಂದ ಶೈಕ್ಷಣಿಕ ವಿವರ (ಬೋನಾಫೈಡ್) ದ ಪ್ರಮಾಣಪತ್ರವನ್ನು ಪಡೆದು ಇ-ಧೃಡೀಕರಣ ಮಾಡಿಸಬೇಕು.

- ❖ ಹಿಂದಿನ ವರ್ಷದಲ್ಲಿ ಕರ್ನಾಟಕ ರಾಜ್ಯದ ಹೊರಗೆ ಇರುವ ವಿಶ್ವವಿದ್ಯಾಲಯ / ಶೈಕ್ಷಣಿಕ ಮಂಡಳಿಯ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದರೆ ಅಂತಹ ವಿದ್ಯಾರ್ಥಿಗಳು ಕಾಲೇಜಿನಿಂದ ಅಂಕಪಟ್ಟಿಯ ಪ್ರಮಾಣಪತ್ರವನ್ನು ಪಡೆದು ಇ-ಧೃಡೀಕರಣ ಮಾಡಿಸಬೇಕು.

## ಸ್ಟೆಪ್-4 (ವಸತಿನಿಲಯಾರ್ಥಿ / ಡೇಸ್ಕಾಲರ್ ವಿವರಗಳು )


ಈ ಹಂತದಲ್ಲಿ ನೀವು ವಸತಿನಿಲಯದಲ್ಲಿ ವಾಸವಿರುವ ಅಥವಾ ಡೇಸ್ಕಾಲರ್ ಎನ್ನುವ ವಿವರಗಳನ್ನು ನೀಡಬೇಕಿರುತ್ತದೆ.

**ಗಮನಿಸಿ :-** ಈ ಕೆಳಕಂಡ ನಿಬಂಧನೆಗಳಿಗನುಗುಣವಾಗಿ ವಿದ್ಯಾರ್ಥಿಗಳನ್ನು ವಸತಿನಿಲಯಾರ್ಥಿ (ಹಾಸ್ಟೆಲ್ಲರ್ ) ಎಂದು ಪರಿಗಣಿಸಲಾಗುವುದು

1. ವಿದ್ಯಾರ್ಥಿಯು ರಾಜ್ಯ ವಸತಿನಿಲಯ ತಂತ್ರಾಂಶದಲ್ಲಿ (SHP) ಅರ್ಜಿ ಸಲ್ಲಿಸಿ ಕಲ್ಯಾಣ ಇಲಾಖೆಗಳಾದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ / ಸಮಾಜ ಕಲ್ಯಾಣ ಇಲಾಖೆ / ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ / ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಇದರಲ್ಲಿ ಯಾವುದಾದರು ಒಂದು ವಸತಿನಿಲಯದಲ್ಲಿ **ದಾಖಲಾತಿ (Admission ) ಪಡೆದು ಸದರಿ ವಿದ್ಯಾರ್ಥಿಯ ವಿವರಗಳು ರಾಜ್ಯ ವಸತಿನಿಲಯ ತಂತ್ರಾಂಶದಲ್ಲಿ (SHP) ದಾಖಲಾಗಿದ್ದರೆ** ಅಂತಹ ವಿದ್ಯಾರ್ಥಿಯನ್ನು **ವಸತಿನಿಲಯಾರ್ಥಿ (ಹಾಸ್ಟೆಲ್ಲರ್** ) ಎಂದು ಪರಿಗಣಿಸಲಾಗುವುದು .
2. ವಿದ್ಯಾರ್ಥಿಯು ಕರ್ನಾಟಕದ ಯಾವುದಾದರು ವಿಶ್ವವಿದ್ಯಾಲಯ / ಶೈಕ್ಷಣಿಕ ಮಂಡಳಿ/ ಕಾಲೇಜುಗಳು ನಿರ್ವಹಿಸುತ್ತಿರುವ (ಹೊಂದಿಕೊಂಡಿರುವ) ವಸತಿನಿಲಯದಲ್ಲಿ ವಾಸವಿದ್ದು ಸಂಬಂದಪ್ಪಟ್ಟ ವಸತಿನಿಲಯದ ವಾರ್ಡನ್ ರವರು SSP -HMIS ತಂತ್ರಾಂಶದಲ್ಲಿ ವಿದ್ಯಾರ್ಥಿಯ ದಾಖಲಾತಿಯ ವಿವರಗಳನ್ನು ನಮೂದಿಸಿದ್ದರೆ ಅಂತಹ ವಿದ್ಯಾರ್ಥಿಯನ್ನು **ವಸತಿನಿಲಯಾರ್ಥಿ (ಹಾಸ್ಟೆಲ್ಲರ್** ) ಎಂದು ಪರಿಗಣಿಸಲಾಗುವುದು .

   ಈ ಮೇಲ್ಕಂಡ ನಿಬಂಧನೆಗಳನ್ನು ಹೊರತುಪಡಿಸಿ ಉಳಿದಿರುವ ಎಲ್ಲಾ ವಿದ್ಯಾರ್ಥಿಗಳನ್ನು **ಡೇಸ್ಕಾಲರ್** ಎಂದು ಪರಿಗಣಿಸಲಾಗುವುದು .

## ಅರ್ಜಿ ಸಲ್ಲಿಸುವ ವಿಧಾನ:-




- ನೀವು ಡೇಸ್ಕಾಲರ್ ವಿದ್ಯಾರ್ಥಿಯೇ?, ಪ್ರಶ್ನೆಗೆ ಮೇಲೆ ವಿವರಿಸಲಾದ ನಿಬಂಧನೆಗಳಿಗನುಗುಣವಾಗಿ ವಿದ್ಯಾರ್ಥಿಯು ವಸತಿನಿಲಯಾರ್ಥಿ (ಹಾಸ್ಟೆಲ್ಲರ್ ) ಆಗಿದ್ದರೆ **"ಇಲ್ಲ"** ಎಂದು ಆಯ್ಕೆ ಮಾಡಿ ನಂತರ ಪರದೆಯ ಮೇಲೆ ಪ್ರದರ್ಶಿಸಲಾಗುತ್ತಿರುವ ವಿದ್ಯಾರ್ಥಿಯು ವಾಸವಾಗಿರುವ ವಸತಿನಿಲಯದ ವಿವರಗಳು ಸರಿಯಾಗಿವೆಯೇ ಎಂದು ಪರಿಶೀಲಿಸಿಕೊಂಡು "Save & Proceed " ಆಯ್ಕೆ ಮಾಡಬೇಕು .

- ಅಥವಾ ವಿದ್ಯಾರ್ಥಿಯು ಡೇಸ್ಕಾಲರ್ ಆಗಿದ್ದಲ್ಲಿ ನೀವು ಡೇಸ್ಕಾಲರ್ ವಿದ್ಯಾರ್ಥಿಯೇ?, ಪ್ರಶ್ನೆಗೆ **"ಹೌದು"** ಎಂದು ಆಯ್ಕೆ ಮಾಡಿ "Save & Proceed " ಆಯ್ಕೆ ಮಾಡಿ ಮುಂದಿನ ಹಂತಕ್ಕೆ ಮುಂದುವರಿಯಬೇಕು.

**<u>ಸ್ಟೆಪ್-5 (ಪೂರ್ವ ವೀಕ್ಷಣೆ & ಅಂತಿಮ ಸಲ್ಲಿಕೆ )</u>**

ಈ ಹಂತದಲ್ಲಿ ವಿದ್ಯಾರ್ಥಿಯು ಸ್ಟೆಪ್-1 ರಿಂದ ಸ್ಟೆಪ್-4 ರವರೆಗೆ ನಮೂದಿಸಲಾದ / ಆಯ್ಕೆ ಮಾಡಲಾದ ಎಲ್ಲಾ ವಿವರಗಳನ್ನು ಮತ್ತೊಮ್ಮೆ ಪರಾಮರ್ಶಿಸಿ ಎಲ್ಲಾ ವಿವರಗಳು ಸರಿಯಾಗಿರುವುದನ್ನು ಖಚಿತಪಡಿಸಿಕೊಂಡು "ಎಲ್ಲಾ ವಿವರಗಳು ಸರಿಯಾಗಿವೆ ಹಾಗೂ ತಪ್ಪಾದ ವಿವರಗಳು / ಮಾಹಿತಿಯು ಕಂಡುಬಂದಲ್ಲಿ ನನ್ನ ಅರ್ಜಿಯನ್ನು ಅಸಿಂಧುಗೊಳಿಸಬಹುದೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ" ಅಲ್ಲಿ ಇರುವ ಚೆಕ್ ಬಾಕ್ಸ್ ಅನ್ನು ಆಯ್ಕೆಮಾಡಿಕೊಂಡು ಅರ್ಜಿ ಸಲ್ಲಿಸಬೇಕು.

**<u>ಗಮನಿಸಿ :-</u>**

- ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿವೇತನ ಯೋಜನೆಗೆ ಅರ್ಹರಿರುವ (ಪರಿಶಿಷ್ಟ ಜಾತಿ ಮತ್ತು ವಾರ್ಷಿಕ 2 .5 ಲಕ್ಷ / ಲಕ್ಷಕ್ಕಿಂತ ಕಡಿಮೆ ವರಮಾನ ) ವಿದ್ಯಾರ್ಥಿಗಳು ಎಸ್ ಎಸ್ ಪಿ ಯಲ್ಲಿ ಅರ್ಜಿ ಸಲ್ಲಿಸಿದ 30 ದಿನಗಳೊಳಗಾಗಿ ನಿಮ್ಮ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಮತ್ತು NPCI ಮ್ಯಾಪಿಂಗ್ ಮಾಡಿಸದೇ ಇದ್ದಲ್ಲಿ ನಿಮ್ಮ ಅರ್ಜಿಯನ್ನು ಸಮಾಜ ಕಲ್ಯಾಣ ಇಲಾಖೆಯ ತಾಲೂಕು ಅಧಿಕಾರಿಗಳು ತಿರಸ್ಕೃತಗೊಳಿಸುತ್ತಾರೆ (ರಿಜೆಕ್ಟ್)

- ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿವೇತನ ಯೋಜನೆಗೆ ಅರ್ಹರಿರುವ (ಪರಿಶಿಷ್ಟ ಜಾತಿ ಮತ್ತು ವಾರ್ಷಿಕ 2 .5 ಲಕ್ಷ / ಲಕ್ಷಕ್ಕಿಂತ ಕಡಿಮೆ ವರಮಾನ ) ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಕೋರ್ಸ್ /ಡಿಸಿಪ್ಲಿನ್ / ಕೋರ್ಸ್ ವರ್ಷ / ಸೀಟ್ ವಿಧಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ವಿಶ್ವವಿದ್ಯಾಲಯ / ಶೈಕ್ಷಣಿಕ ಮಂಡಳಿಯವರು ಶುಲ್ಕ ಮಾಹಿತಿಯನ್ನು ನಮೂದಿಸದೆ / ಸಮಾಜ ಕಲ್ಯಾಣ ಇಲಾಖೆಯ ಅಡ್ಮಿನ್ ಲಾಗಿನ್ ಅಲ್ಲಿ ಅದು ಅನುಮೋದನೆಗೊಳ್ಳದೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು ಅರ್ಜಿಯನ್ನು ಅಂತಿಮ ಸಲ್ಲಿಕೆ (ಫೈನಲ್ ಸಬ್ಮಿಶನ್ ) ಮಾಡಲು ಅವಕಾಶವಿರುವುದಿಲ್ಲ.

- ಯಾವುದೇ ಇಲಾಖೆಯ ವಿದ್ಯಾರ್ಥಿವೇತನ ಯೋಜನೆಗಳಿಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ನಿಮ್ಮ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಮತ್ತು NPCI ಮ್ಯಾಪಿಂಗ್ ಮಾಡಿಸದೇ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ದೊರೆಯುವುದಿಲ್ಲ